QP CODE: 30631

ಆರನೆಯ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ, ಮೇ / ಜೂನ್, 2026

(ಎನ್‌ಇಪಿ ಸ್ಕೀಂ)

ಕನ್ನಡ ಐಚ್ಛಿಕ ಪತ್ರಿಕೆ - 13

(NAF 0510) ಅನಿಕೇತನ - 6

ಕನ್ನಡ ವ್ಯಾಕರಣ ಪರಂಪರೆ - ಶಬ್ದಮಣಿದರ್ಪಣ ಮತ್ತು ರಾಮಧಾನ್ಯ ಚರಿತೆ

ಅವಧಿ : 2 ಗಂಟೆಗಳು ಗರಿಷ್ಠ ಅಂಕಗಳು : 60

ವಿದ್ಯಾರ್ಥಿಗಳಿಗೆ ಸೂಚನೆಗಳು:

1. ವಿದ್ಯಾರ್ಥಿಯು ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ಸ್ಪಷ್ಟವಾಗಿ ಮಾರ್ಜಿನ್ ಗೆರೆಯ ಒಳಗೆ ಬರೆಯಬೇಕು.
2. ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ನಮೂದಿಸದೇ ಇರುವ ಉತ್ತರಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.
3. ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರವನ್ನು ಉತ್ತರ ಪತ್ರಿಕೆಯ ಮೊದಲ ಪುಟದಲ್ಲಿ ಬರೆಯಬೇಕು ಹಾಗೂ ಅದೇ ಪ್ರಶ್ನೆಗಳಿಗೆ ಉತ್ತರವನ್ನು ಪುನರಾವರ್ತಿಸಬಾರದು.
4. ಪ್ರಶ್ನೆ ಪತ್ರಿಕೆಯಲ್ಲಿನ ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ನೀಡಲಾದ ಆಯ್ಕೆ ಉತ್ತರಗಳ (Options) ಮೇಲೆ ಯಾವುದೇ ರೀತಿಯ ಗುರುತು ಸೂಚಕ ಚಿಹ್ನೆಗಳಾದ ವೃತ್ತ ಹಾಕುವುದು, ಚುಕ್ಕೆ ಇಡುವುದು, ಸರಿ ಗುರುತು ಮಾಡುವುದು (✓) ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲಾಗಿದೆ. ಪ್ರಶ್ನೆ ಪತ್ರಿಕೆಯ ಮೇಲೆ (ನೋಂದಣಿ ಸಂಖ್ಯೆಯನ್ನು ಹೊರತುಪಡಿಸಿ) ಬೇರೆ ಯಾವುದೇ ತರಹದ ಬರವಣಿಗೆಗಳನ್ನು ಮಾಡಬಾರದು.

ವಿಭಾಗ - I

I. ಸರಿಯಾದ ಉತ್ತರವನ್ನು ಆಯ್ದು ಬರೆಯಿರಿ. **(10x1=10)**

I-1. ಉತ್ತರ ಪದದ ಅರ್ಥ ಪ್ರಧಾನ ಸಮಾಸ .....
(ಅ) ಅಂಶಿ ಸಮಾಸ (ಆ) ಕ್ರಿಯಾ ಸಮಾಸ (ಇ) ತತ್ಪುರುಷ ಸಮಾಸ (ಈ) ದ್ವಂದ್ವ ಸಮಾಸ

I-2. 'ಬಳೆದೊಟ್ಟಂ' ಎಂಬುದು ಯಾವ ಸಮಾಸಕ್ಕೆ ಉದಾಹರಣೆ .....
(ಅ) ದ್ವಂದ್ವ ಸಮಾಸ (ಆ) ಕ್ರಿಯಾ ಸಮಾಸ (ಇ) ದ್ವಿಗು ಸಮಾಸ (ಈ) ತತ್ಪುರುಷ ಸಮಾಸ

I-3. ದ, ದಪ, ವ ಇದು .....
(ಅ) ವಿಭಕ್ತಿ ಪ್ರತ್ಯಯ (ಆ) ತದ್ಧಿತ ಪ್ರತ್ಯಯ (ಇ) ಅವ್ಯಯಗಳು (ಈ) ಕಾಲವಾಚಕ ಪ್ರತ್ಯಯ

I-4. ಇತಿ, ಅಳ್, ಎ ಎಂಬುದು .....
(ಅ) ಸ್ತ್ರೀ ಪ್ರತ್ಯಯ (ಆ) ಪುರುಷ ಪ್ರತ್ಯಯ (ಇ) ತದ್ಧಿತ ಪ್ರತ್ಯಯ (ಈ) ಅವ್ಯಯಗಳು

I-5. 'ಧಿಗಿಲನೆ' ಎಂಬುದು ಯಾವುದಕ್ಕೆ ಉದಾಹರಣೆ
(ಅ) ವಿಭಕ್ತಿ (ಆ) ಅವ್ಯಯ (ಇ) ಕ್ರಿಯಾಪದ (ಈ) ತದ್ಧಿತ ಪ್ರತ್ಯಯ

I-6. 'ವ್ರೀಹಿ' ಪದದ ಅರ್ಥ .....
(ಅ) ರಾಗಿ (ಆ) ಸಜ್ಜೆ (ಇ) ಭತ್ತ (ಈ) ಭಾಮಿನಿ

I-7. ರಾಮಧಾನ್ಯ ಚರಿತ್ರೆ ಕಾವ್ಯ ಯಾವ ಷಟ್ಪದಿಯಲ್ಲಿದೆ .....
(ಅ) ಶರ (ಆ) ಕುಸುಮ (ಇ) ಭೋಗ (ಈ) ನವಣೆ

I-8. ಧರ್ಮರಾಯನಿಗೆ ರಾಮನ ಕಥೆಯನ್ನು ಹೇಳಿದ ಮುನಿ .....
(ಅ) ಶಾಂಡಿಲ್ಯ (ಆ) ಗೌತಮ (ಇ) ವಸಿಷ್ಠ (ಈ) ವಿಶ್ವಾಮಿತ್ರ

I-9. ರಾಮನ ಮಂತ್ರಿಯ ಹೆಸರು .....
(ಅ) ಸುದೇಶ (ಆ) ಸುಮಂತ್ರ (ಇ) ಭರತ (ಈ) ಲಕ್ಷ್ಮಣ

I-10. ವಿರಂಚಿ ಎಂದರೆ
(ಅ) ಹನುಮ (ಆ) ವಿಷ್ಣು (ಇ) ಶಿವ (ಈ) ಬ್ರಹ್ಮ

ವಿಭಾಗ - II

II. ಐದು ವಿಷಯಗಳಿಗೆ ಟಿಪ್ಪಣ ಬರೆಯಿರಿ. **(5x3=15)**

II-1. ಆಟಪಾಟಕೂಟಂಗಳ್

II-2. ತದ್ಧಿತ ಪ್ರತ್ಯಯ ಉಳ್ಳ - ಒಡೆಯ

II-3. ಇಗ ಪ್ರತ್ಯಯ

II-4. ಪುರುಷವಾಚಕಗಳು

II-5. ವಿಧ್ಯರ್ಥಗಳು

II-6. ಅನುಕರಣಾವ್ಯಯ

II-7. ಗಮಕ ಸಮಾಸ

II-8. ಸಂಖ್ಯೆಯದೆ ವಲಂ ದ್ವಿಗುವಕ್ಕುಂ

ವಿಭಾಗ - III

III. ಕೆಳಗಿನ ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. **(3x5=15)**

III-1. ಶ್ರೀರಾಮನ ಪರಿವಾರಕ್ಕೆ ಗೌತಮ ಮುನಿಗಳು ನೀಡಿದ ಆತಿಥ್ಯವನ್ನು ವರ್ಣಿಸಿ.

III-2. ರಾಮನ ಪುರಾಗಮದ ಸಂದರ್ಭದ ಸಂಭ್ರಮವನ್ನು ಚಿತ್ರಿಸಿ.

III-3. ಶಾಂಡಿಲ್ಯ ಮುನಿಯ ಉಪದೇಶವನ್ನು ಕುರಿತು ಬರೆಯಿರಿ.

III-4. ಭತ್ತವು ತನ್ನ ಶ್ರೇಷ್ಠತೆಯನ್ನು ಹೇಗೆ ಪ್ರತಿಪಾದಿಸುತ್ತದೆ ? ಚರ್ಚಿಸಿ.

III-5. ಶ್ರೀರಾಮಚಂದ್ರನು ಭತ್ತವನ್ನು ಸಂತೈಸಿ, ನೀಡಿದ ಸಹಬಾಳ್ವೆಯ ಸಂದೇಶವನ್ನು ವಿಶದಪಡಿಸಿ.

ವಿಭಾಗ - IV

IV. ಈ ಕೆಳಗಿನ ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ. **(2x10=20)**

IV-1. ಸಮಾಸ ಎಂದರೇನು ? ಸಮಾಸದ ವಿಧಗಳನ್ನು ಸಂಕ್ಷಿಪ್ತ ಉದಾಹರಣೆಯೊಂದಿಗೆ ವಿಶ್ಲೇಷಿಸಿ.

ಅಥವಾ

ಆಖ್ಯಾತ ಪ್ರತ್ಯಯಗಳೆಂದರೇನು? ಅವು ಪ್ರಯೋಗವಾಗುವ ಸಂದರ್ಭಗಳನ್ನು ವಿವರಿಸಿ.

IV-2. ರಾಮಧಾನ್ಯ ಚರಿತೆಯಲ್ಲಿನ ವರ್ಗ ಸಂಘರ್ಷವನ್ನು ಕುರಿತು ವಿವರಿಸಿ.

ಅಥವಾ

ಶ್ರೀ ರಾಮನ ವ್ಯಕ್ತಿತ್ವ ಕನಕದಾಸರ ರಾಮಧಾನ್ಯ ಚರಿತೆ ಕೃತಿಯಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ ? ವಿಶ್ಲೇಷಿಸಿ.

* * *